# ಜೀವ ಕಾಲ

ನಿಸರ್ಗದ ನಡೆ ಸರಳವಾಗಿಲ್ಲ, ಅದು ನಿಗೂಢ. ಅಥವಾ ಅದು ಸರಳವೂ ಪಾರದರ್ಶಕವೂ ಆಗಿಯೇ ಇದ್ದು ನಮಗೆ ಮಾತ್ರ ಹೀಗೆ ಅನ್ನಿಸುವುದೋ ಏನೋ? ಈ ಮಾತುಗಳಿಂದ ನನ್ನ ಮಿತ್ರರು ಸಂಭಾಷಣೆ ಪ್ರಾರಂಭಿಸಿದರು. ಅವರು ಬಹುಕಾಲದಿಂದ ಅಮೇರಿಕೆಯಲ್ಲಿ ನೆಲೆಸಿರುವವರು. ಕನ್ನಡಿಗರು. ಪ್ರಾಧ್ಯಾಪಕರು. ಅಲ್ಲಿನ ಚಳಿಗಾಲದಲ್ಲಿ–

**Fall season** ಅಂತಾರೆ– ನಿಸರ್ಗದಲ್ಲಿ ನಡೆಯುವ ವಿಶೇಷವೊಂದನ್ನು ವಿವರಿಸಲು ಅವರಿಗೆ ಉತ್ಸಾಹ. ಹೇಳಲು ತೊಡಗಿದರು 'ಅಂದ ಹಾಗೆ **Fall** ಎಂದರೆ ಉದುರಿ ಬೀಳೋದಲ್ಲವೆ? ಎಲೆ ಉದುರಿಸಿ ಎಲೆಗಳಲ್ಲಿ ನಡೆಯುವ **photo synthesis** ಕ್ರಿಯೆ ಸ್ಥಗಿತಗೊಂಡು ಬೇರುಗಳಿಗೆ ವಿಶ್ರಾಂತಿಸಿಗುವ ಕಾಲ. ನೋಡಿ ನಿಸರ್ಗದ ಉಪಾಯವನ್ನು. ಜೀವಕ್ರಿಯಾಶೂನ್ಯನಾಗುವುದೂ ಒಂದು ಉಪಾಯ, ಒಂದು ತಂತ್ರ– ನಿಸರ್ಗದಲ್ಲಿ. ಮರಗಳೆಲ್ಲ ಜೀವಕಳೆ ಕಳೆದುಕೊಂಡು ಸತ್ತಂತೆ ಇರುತ್ತವೆ, ಆದರೆ ಸತ್ತಿರೋದಿಲ್ಲ. ಆಳವಾದ ವಿಶ್ರಾಂತಿಯಲ್ಲಿರುತ್ತವೆ. ನಮಗೂ ಸಾವೆಂದರೆ ವಿಶ್ರಾಂತಿ ಇರಬಹುದೆ? ಈ ವಿಶ್ರಾಂತಿ, ಮರಗಳಿಗೆ ಅತ್ಯಗತ್ಯ. ನೀರು ಹೆಪ್ಪುಗಟ್ಟುವ ಹಿಮಪ್ರದೇಶದಲ್ಲಿ ಪ್ರಾಣಿಗಳು ತಮ್ಮ ದೇಹದ ಶಾಖಕ್ಕಿಂತ ವಾತಾವರಣದ ಶಾಖ ಕಡಿಮೆಯಾದಾಗ ದೀರ್ಘನಿದ್ರೆಗೆ ಸಲ್ಲುತ್ತವೆ. ಹೈಬರ್ನೇಟ್ ಎನ್ನುತ್ತಾರೆ. ಅದರಂತೆ ಈ ಸಸ್ಯಗಳ ವಿಶ್ರಾಂತಿ ಕೂಡ. ಆದರೆ ಇದನ್ನಲ್ಲ ನಾನು ಹೇಳಬೇಕೆಂದಿರುವುದು.

**fall season** ಬಂದೇಬರುತ್ತದಲ್ಲ– ಈ ಸೂಚನೆ ಕಂಡುಬರುತ್ತಿದ್ದಂತೆ ಒಂದೆರಡುವಾರಗಳ ಮೊದಲು ಗಿಡಮರಗಳ ದಟ್ಟಹಸಿರು ತೆಳುವಾಗುತ್ತ ಹೋಗುತ್ತದೆ. ಆಗ ಒಂದು ಪವಾಡ ನಡೆಯುತ್ತದೆ. ಇದ್ದಕ್ಕಿದ್ದಂತೆ ಎಲೆಗಳಲ್ಲಿ ನಾನಾಬಣ್ಣಗಳು ಗೋಚರವಾಗುತ್ತವೆ. ಬೇರಿನಿಂದಲೇ ಚಿಮ್ಮಿಬಂದಂತೆ, ಇಂಥದೊಂದು ಅವಕಾಶಕ್ಕಾಗಿ ಬದುಕಿಡೀ ಕಾದುಕೊಂಡಿದ್ದವೆಂಬಂತೆ, ಬಗೆಬಗೆಯ ಬಣ್ಣಗಳು ಬಿಡುಗಡೆಗೊಳ್ಳುತ್ತವೆ. ಇದು ನಿಜಕ್ಕೂ ಬಣ್ಣಗಳ ಬಿಡುಗಡೆ! ಬಣ್ಣಗಳ ಜಾತ್ರೆ. ಓಹ್! ಎಂಥ ಬಣ್ಣಗಳು! ಏನವುಗಳ ಹೆಸರು? ನೋಡುವ ಕಣ್ಣುಗಳೇ ಕಣಿನುಡಿದಂತಿರುವ ಬಣ್ಣಗಳು. ಹುಚ್ಚು ಹಿಡಿಸುವ ಬಣ್ಣಗಳು. ಕಾಮನಬಿಲ್ಲು ಮರಗಿಡಗಳ ಒಡಲಿನಿಂದ ಮೂಡಿಬಂದಂತೆ.

ಮಿತ್ರರು ಹೇಳುತ್ತಿದ್ದಂತೆ ಶಿವರಾಮಕಾರಂತರು ತಮ್ಮ ಭಾಷಣಗಳಲ್ಲಿ ಹೇಳುತ್ತಿದ್ದುದು ನೆನಪಾಗುತ್ತಿತ್ತು. ಬಣ್ಣಗಳ ಕುರಿತು ನಮ್ಮ ಸಂವೇದನೆ ಏನೇನೂ ಸಾಲದು ಎನ್ನುತ್ತಿದ್ದರು– ಕಾರಂತರು. ಬಣ್ಣಗಳನ್ನು ಗುರುತಿಸುವ ನಮ್ಮ ಶಬ್ದಭಂಡಾರವೇ ತೀರ ಸಣ್ಣದೆನ್ನುತ್ತಿದ್ದರು. ನಿಸರ್ಗದ ಬಣ್ಣಗಳನ್ನು ನಾವು ಕಣ್ಣೆಟ್ಟು ನೋಡಿಲ್ಲವೆನ್ನುತ್ತಿದ್ದರು. ಡಿವಿಜಿಯವರು ಕೆಂಪೇಗೌಡರೆಂಬ ಗಾಯಕರ ಹಾಡುಗಾರಿಕೆಯನ್ನು ಬಣ್ಣಿಸುತ್ತ ಕಣ್ಣಮುಂದೆ ಕೆಂದಾವರೆ ಗೊಂಚಲನ್ನು ಸುಳಿದಾಡಿಸಿದಂತೆ ಅವರ ಗಾಯನವನ್ನು ಕೇಳಿದಾಗಿನ ಅನುಭವ ಎಂದು ಹೇಳಿದ್ದು ನೆನಪಾಗುತ್ತಿತ್ತು. ಮಿತ್ರರ ಮಾತು ಕೇಳುವಾಗಲೂ ಕಣ್ಣಮುಂದೆ ಬಣ್ಣಗಳು ಕುಣಿಯುತ್ತಿದ್ದವು. ಇನ್ನೂ ಏನೇನೋ ಯೋಚನೆಗಳು ಮನಸ್ಸಿಗೆ ಹಾಯುತ್ತಿದ್ದವು.

ಹೀಗೆ ಈ ಬಣ್ಣಗಳು ಒಡಮೂಡುವುದಕ್ಕೆ ಕಾರಣವೇನು ಗೊತ್ತೆ? ಎಲೆಗಳಲ್ಲಿ **photo synthesis** ಕ್ರಿಯೆ ಮೆಲ್ಲಗೆ ಕಡಿಮೆಯಾಗುತ್ತಿರೋದು. ಈ ಕ್ರಿಯೆಗೂ ಹಸಿರುಬಣ್ಣಕ್ಕೂ ಸಂಬಂಧ. ಈ ಕ್ರಿಯೆ ನಿಧಾನವಾಗುತ್ತ, **fall season** ವಿಶ್ರಾಂತಿಗೆ ಸಸ್ಯಸಜ್ಜುಗೊಳ್ಳುತ್ತಿದ್ದಂತೆ, ಹಸಿರು ಕಳೆಗುಂದುತ್ತಿದ್ದಂತೆ, ಅದುವರೆಗೆ ತಮ್ಮನ್ನು ಆವರಿಸಿದ ಹಸಿರಿನ ಗೆರೆಮೀರಿ, ತಮ್ಮಬಿಡುಗಡೆಯ ಸಂಭ್ರಮವನ್ನು ತಾವೇ ಅನುಭವಿಸುತ್ತಿವೆಯೋ ಎಂಬಂತೆ, ಈ ನೂರುಬಣ್ಣಗಳು ಮೈದೋರುವವು. ಆದರೆ ಈ ಸಿರಿ ಎಲ್ಲ ಒಂದೆರಡುವಾರಗಳು ಮಾತ್ರ! ಮತ್ತೆ ಕಾದಿದೆ– ಜಾತ್ರೆಮುಗಿದ ನೀರವಮೌನದ, ಎಲ್ಲ ಬಣ್ಣಗೆಡುವ ಮಸಣದ ಬೂದಿಯಂಥ **fall season.**

ಎಲೆಗಳಲ್ಲಿರುವ ಪತ್ರಹರಿತ್ತು ಕಳೆಗುಂದುತ್ತಿರುವಂತೆ ಈ ಬಣ್ಣಗಳು ಹೊರಹೊಮ್ಮುವ ಚಮತ್ಕಾರವನ್ನು ವೈಜ್ಞಾನಿಕವಾಗಿ ವಿವರಿಸುವ ಹುಮ್ಮಸ್ಸು ಮಿತ್ರರದು. ವಸಂತ ಮತ್ತು ಶಿಶಿರ– ಬದುಕು ಮತ್ತು ಸಾವು– ಹೇಗೆ ಒಂದರೊಡನೊಂದು ಹಾವುಗಳಂತೆ ತಳಕುಹಾಕಿಕೊಂಡಿವೆ ಎಂದು– ಈ ತಳಕಿನ ಅರಿವೇ ನಿಜವಾದ ಜೀವಂತಿಕೆಯಲ್ಲವೆ ಎಂದು ನನ್ನ ಮನಸ್ಸು ಒಮ್ಮೆ ಅಚ್ಚರಿಗೆ, ಒಮ್ಮೆ ವಿಷಣ್ಣತೆಗೆ ಒಳಗಾಗುತ್ತಿತ್ತು.

**Fall season** ಬರುವ ಮುನ್ನಿನ ವಸಂತಕಾಲವಿದು. ಇನ್ನೇನು **Fall season** ಬರುತ್ತೆ, ಶಿಶಿರ ಬರುತ್ತೆ, ಎನ್ನುವ ಅರಿವಿನಲ್ಲಿ ಹುಟ್ಟಿಕೊಂಡ ಚೈತ್ರದ ಅನಿರೀಕ್ಷಿತ ಚಟುವಟಿಕೆ ಇದು. ಇದು ಸಣ್ಣ ವಸಂತ. ಕೆಲವೇ ದಿನಗಳ ವಸಂತ. ವರ್ಣ ವಸಂತ. ಅಥವಾ ಇದನ್ನು ವಸಂತವೆನ್ನದೆ ಬೇರಾವ ಹೊಸಹೆಸರಿನಲ್ಲಿ ಕರೆಯಬಹುದು? ಇದು ಸಾವಿನ ಅರಿವಿನಲ್ಲಿ ಹೊಮ್ಮುವ ಶುಭ್ರ ಜೀವಂತಿಕೆ! ಸಾವೂ ಬದುಕೂ ಒಂದಾಗಿಬಿಟ್ಟ ಸಾವಿನ ಎಣ್ಣೆಯಿಂದ ಉರಿಯುತ್ತಿರುವ ಬದುಕಿನ ದೀಪ!

ಈ ಸಣ್ಣ ವಸಂತ ಸಸ್ಯಗಳಿಗೆ ಮಾತ್ರವೋ? ಪಶು – ಪಕ್ಷಿಲೋಕ ಕೂಡ ಈ ಸಂಭ್ರಮದಲ್ಲಿ ಪಾಲ್ಗೊಳ್ಳುವವೋ? ಆಗ ಕೋಗಿಲೆ ಕೂಗುವುದೆ? ಚಿಟ್ಟೆಗಳು ಹೂವಿಗೆ ಹಾರುವವೆ? ಜೇನುಹುಳಗಳು ಝೇಂಕರಿಸುವವೇ? ಅಥವಾ ಉಳಿದ ಜಗತ್ತು ಇನ್ನೇನು ಬರಲಿರುವ **Fall season**ನ ಮುನ್ನರಿವಿನಲ್ಲಿ , ಸಸ್ಯಗಳ ಈ ವರ್ಣಜ್ವಾಲೆಯನ್ನು, ಆರುತ್ತಿರುವ ದೀಪದ ಕುಡಿಯ ಉಜ್ವಲತೆಯನ್ನು ವಿಷಣ್ಣತೆಯಿಂದ ನೋಡುತ್ತವೆಯೆ? ಸಾಕ್ಷೀಭಾವದಿಂದ ನೋಡುವವೆ? ನಾನು ಮಿತ್ರರನ್ನು ಕೇಳಲಿಲ್ಲ.

ಇದ್ದಕ್ಕಿದ್ದಂತೆ ಅದೇಕೋ ಈ ವಸಂತಪ್ರಕರಣ ತಾನೇ ನಿಜವಾದ ವಸಂತ ಎಂದು ಕೂಗಿ ಹೇಳುತ್ತಿರುವಂತೆ ಕೇಳಿಸಿತು. **Fall season** ಕಳೆದ ಮೇಲೆ ಬರುವ ವಸಂತ ರೂಢಿಗತ ವಸಂತ. ಅದು ಅಭ್ಯಾಸ ಮಾಡಿದ ಹೆಜ್ಜೆಗಾರಿಕೆ. ಎಲ್ಲರ ನಿರೀಕ್ಷೆಯನ್ನು ನಿಜ ಮಾಡಬೇಕಲ್ಲ ಎಂದು ರಂಗಕ್ಕೆ ಬಂದುನಿಂತ ನಟ. ನಟಿ. ಈ ಅನಿರೀಕ್ಷಿತ ವಸಂತದಲ್ಲಿಯಾದರೋ ಈ ಕ್ಷಣ ನಿನ್ನದು; ಉರಿದು ಬಿಡು ಒಡಲೊಳಗಿನ ವರ್ಣಪ್ರಭೆಯೇ– ಎನ್ನುವ ಜೀವ ತವಕ! ನಶ್ವರ ಕ್ಷಣದ ಪ್ರಭೆ ಇಲ್ಲಿ ಹೊಳೆಯುತ್ತಿದೆ. ನಮ್ಮ ಪಂಪ ಕವಿ "ಆದಿಪುರಾಣ"ದಲ್ಲಿ ಬಣ್ಣಿಸಿದ ನೀಲಾಂಜನೆಯ ನೃತ್ಯ ಸಂಭ್ರಮದಂತೆ. ಅರಸನ ಆಸ್ಥಾನ. ರಸಿಕ ಸಭಾಸದರ ನೆರವಿ. ಎಲ್ಲೆಡೆ ಉತ್ಸಾಹ; ಕಾತರ; ಉದ್ವೇಗ. ಸ್ವಯಂ ಇಂದ್ರನೇ ಏರ್ಪಡಿಸಿರುವ ನೃತ್ಯ ವಿಶೇಷ. ಇಲ್ಲಿ ನೀಲಾಂಜನೆ ನೃತ್ಯವನ್ನು ಮಾಡುತ್ತ ಮಾಡುತ್ತ ಹೇಗೆ ತನ್ನ ಬದುಕಿನ ಉತ್ಕಾಂಕವನ್ನು ಮುಟ್ಟಿಬಿಟ್ಟಳೆಂದರೆ ಅವಳ ಬದುಕು ಅಲ್ಲಿಗೇ ಪೂರ್ಣವಾಯಿತು.

ಬದುಕು ಕೊನೆಯಾಗಿಬಿಟ್ಟಿತು! ಪಂಪನ ನಿಲುವು ಏನೆಂದರೆ– ಅನಿಶ್ಚಿತತೆ, ಅಶಾಶ್ವತತೆಯೊಂದೇ ಬದುಕಿನ ನಿಶ್ಚಿತ ಸತ್ಯ ಎನ್ನುವುದು!

ಈ ಕ್ಷಣ ಧನ್ಯತೆಯ ಕ್ಷಣವೂ ಹೌದು ಎನ್ನುವುದು ಆಧುನಿಕ ನಿಲುವು.

■ **ತೋಷ**

## ಮಾತೇ ಮುತ್ತು

★ ಬುದ್ಧಿವಂತ ಮನುಷ್ಯನ ತಲೆಯಲ್ಲಿ ಹಣ ಇರುವುದಿಲ್ಲ; ಹೃದಯದಲ್ಲಿ ಹಣ ಇರುತ್ತದೆ.
-ಜೊನಾಥನ್ ಸ್ವಿಫ್ಟ್

★ ಸಾಮಾನ್ಯ ಮನುಷ್ಯ ಪ್ರಾರ್ಥಿಸುವುದಿಲ್ಲ; ಕೇವಲ ಬೇಡುತ್ತಾನೆ.
–ಜಾರ್ಜ್ ಬರ್ನಾರ್ಡ್ ಷಾ

★ ಕಲೆಯನ್ನು ಶಾಲೆಗಳಲ್ಲಿ ಕಲಿಸಲಾಗುವುದಿಲ್ಲ. ಕಲಾವಿದನಿಗೆ ರಸ್ತೆಗಳೇ ನಿಜವಾದ ಶಾಲೆಗಳು.
–ಆಸ್ಕರ್ ವೈಲ್ಡ್

★ ಪ್ರತಿಯೊಬ್ಬ ಮಗುವೂ ಒಬ್ಬ ಕಲಾವಿದ. ಆದರೆ ಬೆಳೆಯುತ್ತಾ ಹೋದಂತೆ ಈ ಕಲಾವಿದ ಉಳಿದುಕೊಳ್ಳುತ್ತಾನೆಯೋ ಎನ್ನುವುದಷ್ಟೇ ಪ್ರಶ್ನೆ.
–ಪಾಬ್ಲೊ ಪಿಕಾಸೊ

★ ದಾರಿಯಲ್ಲಿ ಬೊಗಳುವ ಎಲ್ಲ ನಾಯಿಗಳತ್ತಲೂ ಕಲ್ಲೆಸೆಯುತ್ತಾ ನಿಂತರೆ, ನಿಮ್ಮ ಗುರಿಯನ್ನು ನೀವು ಎಂದೂ ತಲುಪಲಾರಿರಿ.
–ವಿನ್‌ಸ್ಟನ್ ಚರ್ಚಿಲ್

★ ಪುಸ್ತಕಗಳು ಒಂದೋ ಕನಸುಗಳಾಗಿರುತ್ತವೆ ಅಥವಾ ಖಡ್ಗಗಳಾಗಿರುತ್ತವೆ.
–ಅಮಿ ಲೊವೆಲ್

★ ದೇವರು ಬುದ್ಧಿವಂತ; ಆದರೆ ಅಪ್ರಾಮಾಣಿಕ ಅಲ್ಲ.
–ಆಲ್ಬರ್ಟ್ ಐನ್‌ಸ್ಟೀನ್

★ ಸರ್ಕಾರ ಅಂದ ಮೇಲೆ, ಕುರಿಗಳೂ ಇರಬೇಕು, ಕಟುಕರೂ ಇರಬೇಕು.
–ವಾಲ್ಟೇರ್